ಕರ್ನಾಟಕ ಸಾಹಿತ್ಯ ಅಕಾಡೆಮಿ

# ಕವಿತೆಗಳು
## 1986

ಸಂಪಾದಕ : ದೊಡ್ಡ ರಂಗೇಗೌಡ

# ಹಣ–ಹಣತೆಗಳ ಹಬ್ಬವೆ !

ಸಿದ್ಧಯ್ಯ ಪುರಾಣಿಕ

ಬೆಳಕು ಕತ್ತಲೆಯನೇ ಕಬಳಿಸಲಿ
ಕತ್ತಲೆ ಬೆಳಕನ್ನೇ ನುಂಗಲಿ
ಬೆಳಕು ನಿಶ್ಚಿತ !
ಅಂತೆ ಬೆಳಕಿನ ವ್ರತ–
ಬಾಳಾಗೆ ಬೆಳಕಿನ ಪಥ !

ಉಳ್ಳವರ ಬಲ್ಲಿದರ
ಹಣದ ಹಬ್ಬ ಮಾತ್ರವಲ್ಲ
ಈ ದೀಪಾವಳಿ
ಕತ್ತಲೆಯ ಹೊಲದಲ್ಲಿ
ಬೆಳಕನ್ನು ಬಿತ್ತುವ
ಹಣತೆಗಳ ಹಬ್ಬವೂ ಹೌದು
ಈ ದೀಪಾವಳಿ
ಹಣದ ಮಬ್ಬಿನ ಗರ್ಭ ಸೇರಲಿ
ಹದುಳದ ಹಣತೆಗಳ ಸಿರಿಬೆಳಕು—
ಸಾಕು ಬರೀ ಥಳಕು !

ಹೊಸಬಾಳ ಹರಿಕಾರನಾಗಿ
ಹರಿಯಲಿ ಹೆಚ್ಚಿನ ಹಣವು

ಹಳ್ಳಿಗಳತ್ತ
ಕೊಳೆಗೇರಿಗಳತ್ತ
ಅರೆ ಹೊಟ್ಟೆಯತ್ತ
ಬರೀ ಮೈಯತ್ತ
ಹೊಸ ಆಸೆಯ ಚಿಗುರಿಸುತ್ತ !

ಗುಡಿಸಲುಗಳ
ಜೋಪಡಿಗಳ
ದಟ್ಟ ಕಾವಳದಲ್ಲಿಯೇ
ಲಕಲಕಿಸುವ
ನೇತ್ರ ನಕ್ಷತ್ರಗಳು !

ಥಳಥಳಿಪ ಮಹಲುಗಳ
ಝಗಝಗಿಪ ದೀಪಗಳ
ಪ್ರಖರ ಪ್ರಕಾಶದಲ್ಲಿಯೂ
ನಿಸ್ತೇಜ ನಯನಗಳು

ಆ ಹೊಳಪು ಇಲ್ಲಿಗೆ
ಈ ಹೆಚ್ಚಿನ ಹಣ ಅಲ್ಲಿಗೆ
ಹರಿಯಲಣಿಗೊಳಿಸುವಿಯಾ
ಹಣ–ಹಣತೆಗಳ ಹಬ್ಬವೆ ?